## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಮಂಡ್ಯ

## ಸ್ಪೆಷಲ್ ಕೇಸ್ ನಂಬರ್ಃ **270/2023**

ಪಿರ್ಯಾದುದಾರರುಃ ಅರಕೆರೆ ಪೊಲೀಸ್ ಠಾಣೆ

**-ವಿರುದ್ಧ-**

ಆರೋಪಿ ಶಶಿಕುಮಾರ. ಕೆ. ಆರ್

ತಂದೆಯ ಹೆಸರು ರಾಮೇಗೌಡ

ವಯಸ್ಸು ವರುಷ

ಉದ್ಯೋಗ

ವಾಸ ಸ್ಥಳ ಕೊಡಿಯಾಲ ಗ್ರಾಮ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ.

ದಂಡ ಪ್ರಕ್ರಿಯಾ ಸಂಹಿತೆ ಕಲಂ **313** ರನ್ವಯ ದಾಖಲಿಸಿಕೊಂಡ ಆರೋಪಿಯ ಹೇಳಿಕೆ

ಪ್ರಶ್ನೆ 1. ನ್ಯಾಯಾಲಯದಲ್ಲಿ ಅಭಿಯೋಜನದ ಪರವಾಗಿ ವಿಚಾರಣೆಗೊಳಪಟ್ಟ ಪ್ರಾ.ಸಾ-1 ರಿಂದ ಪ್ರಾಸಾ-4 ರವರ ಸಾಕ್ಷ್ಯವನ್ನು ಕೇಳಿ ತಿಳಿದುಕೊಂಡಿರುವಿರಾ?

ಉತ್ತರ :

ಪ್ರಶ್ನೆ 2. ಪ್ರಾ.ಸಾ-1/ಮಹೇಶ ರವರು ತಮ್ಮ ಸಾಕ್ಷ್ಯದಲ್ಲಿ ದಿಃ 27.06.2023 ರಂದು ಪಂಚಾಯಿತಿ ಕಛೇರಿಯಲ್ಲಿ ಇದ್ದಾಗ ಅರಕೆರೆ ಪೊಲೀಸರು ನನ್ನ ಕಛೇರಿಗೆ ಬಂದು ಕೊಡಿಯಾಲ ಗ್ರಾಮದಲ್ಲಿ ಶಶಿ ಕುಮಾರ ಎನ್ನುವವರು ತಮ್ಮ ಬಾಡಿಗೆ ಮನೆಯ ಪರಿಧಿಯಲ್ಲಿ ಅಕ್ರಮವಾಗಿ ಗಾಂಜಾ ಬೆಳೆದಿದ್ದಾರೆ ಎನ್ನುವ ಮಾಹಿತಿ ಬಂದಿದ್ದು, ಸದರಿ ಮಾಹಿತಿಯ ವಿಚಾರವಾಗಿ ತನಿಖೆ ನಡೆಸುವಾಗ ಪಂಚರಾಗಿ ಕೆಲಸ ಮಾಡಲು ಬರುವಂತೆ ಕರೆದಿದ್ದರಿಂದ ನಾನು ಶ್ರೀರಂಗಪಟ್ಟಣ ಅರಕೆರೆ ಪೊಲೀಸ್ ಠಾಣೆಗೆ ಹೋದೆನು ಎಂದು ಹೇಳಿದ್ದಾರೆ.

ಉತ್ತರ :

ಪ್ರಶ್ನೆ 3. ಪ್ರಾ.ಸಾ-1 ರವರು ತಮ್ಮ ಸಾಕ್ಷ್ಯದಲ್ಲಿ ಅರಕೆರೆ ಪೊಲೀಸ್ ಠಾಣೆಯಲ್ಲಿ ಪೊಲೀಸರು ನನಗೆ ಮೇಲೆ ಹೇಳಿದ ವಿಚಾರಗಳ ಕುರಿತು ಪಂಚರಾಗಿ ಕೆಲಸ ಮಾಡುವಂತೆ ನೋಟೀಸು ಕೊಟ್ಟರು ಎಂದು ಹೇಳಿದ್ದಾರೆ.

ಉತ್ತರ :

ಪ್ರಶ್ನೆ 4. ಪ್ರಾ.ಸಾ-1 ರವರು ತಮ್ಮ ಸಾಕ್ಷ್ಯದಲ್ಲಿ ಪೊಲೀಸರು ನನ್ನ ಜೊತೆಯಲ್ಲಿ ಶ್ರೀರಂಗಪಟ್ಟಣ ತಾಲ್ಲೂಕು ಕೊಡಿಯಾಲ ಗ್ರಾಮದ ಡೈರಿ ಹತ್ತಿರ ಇದ್ದ ಮನೆಯ ಹತ್ತಿರ ಕರೆದುಕೊಂಡು ಹೋಗಿ ತನಿಖೆ ಮಾಡಿದಾಗ 1 ಗಾಂಜಾ ಗಿಡ ಇತ್ತು ಮತ್ತು ಪೊಲೀಸರು ಮೇಲೆ ಹೇಳಿದಂತೆ ಕಂಡು ಬಂದ 1 ಗಾಂಜಾ ಗಿಡವನ್ನು ಕಿತ್ತು ತೂಕ ಮಾಡಿದಾಗ ಅದರ ತೂಕ 770 ಗ್ರಾಂ ಬಂದಿತು ಎಂದು ಹೇಳಿದ್ದಾರೆ.

ಉತ್ತರ :

ಪ್ರಶ್ನೆ 5. ಪ್ರಾ.ಸಾ-1 ರವರು ತಮ್ಮ ಸಾಕ್ಷ್ಯದಲ್ಲಿ ಪೊಲೀಸರು ಮೇಲೆ ಹೇಳಿದಂತೆ ಸಿಕ್ಕಿದ 1 ಗಾಂಜಾ ಗಿಡವನ್ನು ನನ್ನ ಸಮಕ್ಷಮ ಮಹಜರು ತಯಾರಿಸಿ ಫೋಟೋ ತೆಗೆಸಿ ಪೊಟ್ಟಣ ಕಟ್ಟಿ ವಶಪಡಿಸಿಕೊಂಡರು ಎಂದೂ, ಮೇಲೆ ಹೇಳಿದ ಮನೆಯ ಮಾಲೀಕರ ಹೆಸರು ರಮಾ ಎಂದು ಮತ್ತು ಪೊಲೀಸರು ತಯಾರಿಸಿದ ಮಹಜರಿನ ಮೇಲೆ ನಾನು ಮತ್ತು high school teacher ಮತ್ತು ಪೊಲೀಸರು ಸಹಿ ಮಾಡಿದ್ದೇವೆ ಎಂದು ಹೇಳಿದ್ದಾರೆ.

ಉತ್ತರ :

ಪ್ರಶ್ನೆ 6. ಪ್ರಾ.ಸಾ-1 ರವರು ತಮ್ಮ ಸಾಕ್ಷ್ಯದಲ್ಲಿ ದಿ 28.06.2023 ರಂದು ಅರಕೆರೆ ಪೊಲೀಸರು ಶಶಿ ಕುಮಾರ್ ರವರು ವಾಸವಾಗಿದ್ದ ಮನೆಯ ದಾಖಲೆಯನ್ನು ಕೊಡುವಂತೆ ಪತ್ರ ಕಳುಹಿಸಿದ್ದ ಮೇರೆಗೆ ನಾನು ಕೊಡಿಯಾಲ ಗ್ರಾಮದ 69/75/38/2 ನೇ ಆಸ್ತಿಗೆ

ಸಂಬಂಧಿಸಿದ ಖಾತೆ ದಾಖಲೆ ಪ್ರತಿಯನ್ನು ಪೊಲೀಸರಿಗೆ ಕಳುಹಿಸಿದ್ದೇನೆ ಎಂದು ಹೇಳಿದ್ದಾರೆ.

ಉತ್ತರ :

ಪ್ರಶ್ನೆ 7. ಪ್ರಾ.ಸಾ-2/ಹೆಚ್.ಎಸ್.ಮುರಳಿ ರವರು ತಮ್ಮ ಸಾಕ್ಷ್ಯದಲ್ಲಿ ದಿಃ 27.06.2023 ರಂದು ನನಗೆ ಕೊಡಿಯಾಲ ಗ್ರಾಮದಲ್ಲಿ ರಾಮೇಗೌಡರ ಮಗ ಶಿಶಿಕುಮಾರ ತನ್ನ ಮನೆಯ ಹತ್ತಿರ ಗಾಂಜಾ ಗಿಡ ಬೆಳೆದಿರುವುದಾಗಿ ಬಂದ ಸುದ್ದಿಯನ್ನು ಕೆ ಆರ್ ಸಾಗರ ವೃತ್ತ ನಿರೀಕ್ಷಕರಾದ ಪುನೀತ ರವರಿಗೆ ಅರಕೆರೆ ಪೊಲೀಸ್ ಠಾಣೆಯ PSI ರವರಿಗೆ ತಿಳಿಸಿ ಗಾಂಜಾ ಬೆಳೆದಿದೆ ಎನ್ನುವ ಸ್ಥಳಕ್ಕೆ ಹೋಗಿ ತನಿಖೆ ಮಾಡಬೇಕಾಗಿದೆ ಎಂದು ತಿಳಿಸಿದೆನು ಮತ್ತು ಆನಂತರ ಕೆ ಆರ್ ಸಾಗರ ವೃತ್ತದ CPI ಅರಕೆರೆ ಪೊಲೀಸ್ ಠಾಣೆಯ CPI ಸಿಬ್ಬಂದಿಯ ಜೊತೆಯಲ್ಲಿ ಕೊಡಿಯಾಲ ಗ್ರಾಮಕ್ಕೆ ಹೋದೆವು ಎಂದು ಹೇಳಿದ್ದಾರೆ.

ಉತ್ತರ :

ಪ್ರಶ್ನೆ 8. ಪ್ರಾ.ಸಾ-2 ರವರು ತಮ್ಮ ಸಾಕ್ಷ್ಯದಲ್ಲಿ ಕೊಡಿಯಾಲ ಗ್ರಾಮದಲ್ಲಿ ಮಹೇಶ ಬಿನ್ ಪುಟ್ಟಶೆಟ್ಟಿ ರವರಿಗೆ ಪಂಚರಾಗಿ ಕೆಲಸ ಮಾಡುವಂತೆ ನಿಪಿ-1 ಗುರುತಿಸಿರುವ ನೋಟೀಸನ್ನು ಜಾರಿ ಮಾಡಿ ಕೊಡಿಯಾಲ ಗ್ರಾಮದಲ್ಲಿ ಸರ್ಕಾರಿ ಪ್ರೌಢಶಾಲೆಯ ದೈಹಿಕ ಶಿಕ್ಷಕರಾಗಿದ್ದ ಡಿ.ವಿ.ಸಿದ್ದರಾಜು ಬಿನ್ ದೇವೆಗೌಡ ರವರಿಗೆ ತನಿಖೆ ಮಾಡುವಾಗ ಪಂಚರಾಗಿ ಕೆಲಸ ಮಾಡುವಂತೆ ನೋಟೀಸನ್ನು ಜಾರಿ ಮಾಡಿದೆನು ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 9. ಪ್ರಾ.ಸಾ-2 ರವರು ತಮ್ಮ ಸಾಕ್ಷ್ಯದಲ್ಲಿ ಕೆ ಆರ್ ಸಾಗರ ಪೊಲೀಸ್ ಠಾಣೆಯ CPI ಅರಕೆರೆ ಪೊಲೀಸ್ ಠಾಣೆಯ PSI ಸಿಬ್ಬಂದಿ ಡಿ. ವಿ. ಸಿದ್ದರಾಜು, ಮಹೇಶ ರವರ ಜೊತೆಯಲ್ಲಿ ಕೊಡಿಯಾಲ ಗ್ರಾಮದ ಡೈರಿ ಬಳಿ ಇದ್ದ ಶಶಿ ಕುಮಾರ ಬಿನ್

ರಾಮೇಗೌಡ ರವರ ಮನೆಯ ಹತ್ತಿರ ಹೋಗಿ ತನಿಖೆ ಮಾಡಿದಾಗ ಶಶಿಕುಮಾರ ರವರ ಮನೆಯ ಹಿಂಭಾಗ ಇರುವ ಜಾಗದಲ್ಲಿ 1 ಗಾಂಜಾ ಗಿಡ ಬೆಳೆಸಿರುವುದು ಕಾಣಿಸಿತು ಮತ್ತು ನಾವು ಸ್ಥಳದಲ್ಲಿ ಸಿಕ್ಕಿದ ಶಶಿಕುಮಾರನನ್ನು ವಿಚಾರಣೆ ಮಾಡಿದಾಗ ಆತ ಗಾಂಜಾ ಗಿಡವನ್ನು ಬೆಳೆದಿರುವುದಾಗಿ 3 ಅಥವಾ 6 ತಿಂಗಳಿಗೆ ಒಮ್ಮೆ ಅಪರಿಚಿತ ಸನ್ಯಾಸಿ ಬಂದು ಗಾಂಜಾ ಸೊಪ್ಪನ್ನು ಖರೀದಿ ಮಾಡಿ ಹೊಗುತ್ತಿರುವುದಾಗಿ ತಿಳಿಸಿದನು ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 10. ಪ್ರಾ.ಸಾ-2 ರವರು ತಮ್ಮ ಸಾಕ್ಷ್ಯದಲ್ಲಿ ನಾನು ಮತ್ತು ನನ್ನ ಜೊತೆಯಲ್ಲಿ ಇದ್ದ ಪೊಲೀಸರು ಶಶಿಕುಮಾರನಿಂದ ಗಾಂಜಾ ಗಿಡಗಳನ್ನು ಕೀಳಿಸಿ ನನ್ನ ಜೊತೆಯಲ್ಲಿ ಇದ್ದ HC 235 ನೇ ರವರಿಂದ electronic ತೂಕದ ಯಂತ್ರವನ್ನು ತರಿಸಿ ಸ್ಥಳದಲ್ಲಿ ಸಿಕ್ಕಿದ ಗಾಂಜಾ ಗಿಡವನ್ನು ತೂಕ ಮಾಡಿದಾಗ ಗಾಂಜಾ ಗಿಡ 770 ಗ್ರಾಂ ತೂಗಿತು ಮತ್ತು ಸದರಿ ಗಾಂಜಾ ಗಿಡವನ್ನು ಒಂದು ಬಿಳಿಯ ಬಟ್ಟೆಯ ಚೀಲಕ್ಕೆ ಹಾಕಿ ಬಾಯಿ ಕಟ್ಟಿ ಸೀಲು ಮಾಡಿ ಪಂಚರ ಸಮಕ್ಷಮ ನಿಪಿ-2 ರಲ್ಲಿ ಗುರುತಿಸಿರುವ ಮಹಜರು ತಯಾರಿಸಿ ನಿಪಿ-3 ರಿಂದ 8 ರವರೆಗೆ ಗುರುತಿಸಿರುವ ಫೋಟೋಗಳನ್ನು ತೆಗೆಸಿ ವಶಪಡಿಸಿಕೊಂಡೆವು ಎಂದು ಹೇಳಿದ್ದಾರೆ.

ಪ್ರಶ್ನೆ 11. ಪ್ರಾ.ಸಾ-2 ರವರು ತಮ್ಮ ಸಾಕ್ಷ್ಯದಲ್ಲಿ ಮೇಲೆ ಹೇಳಿದಂತೆ ಗಾಂಜಾ ಗಿಡವನ್ನು ವಶಪಡಿಸಿಕೊಂಡು ಆರೋಪಿ ಶಶಿಕುಮಾರನನ್ನು ನಮ್ಮ ಸ್ವಾಧೀನಕ್ಕೆ ಹಿಡಿದುಕೊಂಡು ಅರಕೆರೆ ಪೊಲೀಸ್ ಠಾಣೆಗೆ ಹೋಗಿ ವರದಿಯನ್ನು ತಯಾರಿಸಿ ಅರಕರೆ ಠಾಣಾಧಿಕಾರಿಯಾಗಿದ್ದ PSI ಚಾಸಾ-18 ನೇ ಎಂ ಆರ್ ಬ್ಯಾಳಿ ರವರ ಕೈಗೆ ಕೊಟ್ಟೆನು ಎಂದೂ, ನಾನು ವರದಿಯ ಜೊತೆಯಲ್ಲಿ ನಿಪಿ-2 ರಲಿ ಗುರುತಿಸಿರುವ 1 ರಿಂದ 8 ರವರೆಗೆ ಗುರುತಿಸಿರುವ

ಮಹೇಶ ಬಿನ್ ಪುಟ್ಟಶೆಟ್ಟಿ ರವರಿಗೆ ಜಾರಿ ಮಾಡಿರುವ ನೋಟೀಸು, ಮಹಜರು ಮತ್ತು ಫೋಟೋಗಳನ್ನು ಚಾಸಾ-18 ರವರ ಕೈಗೆ ಕೊಟ್ಟಿದ್ದೇನೆ ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 12. ಪ್ರಾ.ಸಾ-2 ರವರು ತಮ್ಮ ಸಾಕ್ಷ್ಯದಲ್ಲಿ ವರದಿಯ ಜೊತೆಯಲ್ಲಿ ಡಿ ವಿ ಸಿದ್ದರಾಜು ರವರಿಗೆ ಜಾರಿ ಮಾಡಿರುವ ನೋಟೀಸು ಮತ್ತು ಆರೋಪಿಯನ್ನು ಚಾಸಾ-18 ರವರ ಸ್ವಾಧೀನಕ್ಕೆ ಕೊಟ್ಟಿದ್ದೇನೆ ಮತ್ತು ನಾನು 10.07.2023 ರಂದು ಅರಕೆರೆ ಪೊಲೀಸ್ ಠಾಣೆಯ PSI ರವರಿಗೆ 27.06.2023 ನೇ ದಿನಾಂಕದ ಠಾಣಾ ದಿನಚರಿಯ ಪ್ರತಿಯನ್ನು ಕವಚ ಪತ್ರದ ಜೊತೆಯಲ್ಲಿ ಕಳುಹಿಸಿದ್ದೇನೆ ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 13. ಪ್ರಾ.ಸಾ-3/ಟಿ.ಎಂ.ಪುನೀತ್ ರವರು ತಮ್ಮ ಸಾಕ್ಷ್ಯದಲ್ಲಿ ದಿಃ 27.06.2023 ರಂದು ನನಗೆ ಕೊಡಿಯಾಲ ಗ್ರಾಮದಲ್ಲಿ ರಾಮೇಗೌಡರ ಮಗ ಶಿಶಿಕುಮಾರ ತನ್ನ ಮನೆಯ ಹತ್ತಿರ ಗಾಂಜಾ ಗಿಡ ಬೆಳೆದಿರುವುದಾಗಿ ಸುದ್ದಿ ಬಂದಿದೆ ಎಂದು DYSP ಹೆಚ್.ಎಸ್.ಮುರಳಿ ರವರು ತಿಳಿಸಿದರು ಮತ್ತು ಗಾಂಜಾ ಬೆಳೆದಿದೆ ಎನ್ನುವ ಸ್ಥಳಕ್ಕೆ ಹೋಗಿ ತನಿಖೆ ಮಾಡಬೇಕಾಗಿದೆ ಎಂದು ತಿಳಿಸಿದರು, ಆನಂತರ ಅರಕೆರೆ ಪೊಲೀಸ್ ಠಾಣೆಯ CPI ಸಿಬ್ಬಂದಿಯ ಜೊತೆಯಲ್ಲಿ ಕೊಡಿಯಾಲ ಗ್ರಾಮಕ್ಕೆ ಹೋದೆವು ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 14. ಪ್ರಾ.ಸಾ-3 ರವರು ತಮ್ಮ ಸಾಕ್ಷ್ಯದಲ್ಲಿ ಕೊಡಿಯಾಲ ಗ್ರಾಮದಲ್ಲಿ ಮಹೇಶ ಬಿನ್ ಪುಟ್ಟಶೆಟ್ಟಿ ರವರಿಗೆ ಪಂಚರಾಗಿ ಕೆಲಸ ಮಾಡುವಂತೆ ನೋಟೀಸನ್ನು DYSP ರವರು ಜಾರಿ ಮಾಡಿದರು, ಕೊಡಿಯಾಲ ಗ್ರಾಮದಲ್ಲಿ ಸರ್ಕಾರಿ ಪ್ರೌಢಶಾಲೆಯ ದೈಹಿಕ ಶಿಕ್ಷಕರಾಗಿದ್ದ ಡಿ.ವಿ.ಸಿದ್ದರಾಜು ಬಿನ್ ದೇವೆಗೌಡ ರವರಿಗೆ ತನಿಖೆ ಮಾಡುವಾಗ ಪಂಚರಾಗಿ ಕೆಲಸ ಮಾಡುವಂತೆ

ನೋಟೀಸನ್ನು DYSP ರವರು ಜಾರಿ ಮಾಡಿದರು ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 15. ಪ್ರಾ.ಸಾ-3 ರವರು ತಮ್ಮ ಸಾಕ್ಷ್ಯದಲ್ಲಿ ಆನಂತರ DYSP, ನಾನು ಅರಕೆರೆ ಪೊಲೀಸ್ ಠಾಣೆಯ PSI ಸಿಬ್ಬಂದಿ ಡಿ. ವಿ. ಸಿದ್ದರಾಜು, ಮಹೇಶ ರವರ ಜೊತೆಯಲ್ಲಿ ಕೊಡಿಯಾಲ ಗ್ರಾಮದ ಡೈರಿ ಬಳಿ ಇದ್ದ ಶಶಿ ಕುಮಾರ ಬಿನ್ ರಾಮೇಗೌಡ ರವರ ಮನೆಯ ಹತ್ತಿರ ಹೋಗಿ ತನಿಖೆ ಮಾಡಿದಾಗ ಶಶಿಕುಮಾರ ರವರ ಮನೆಯ ಹಿಂಭಾಗ ಇರುವ ಜಾಗದಲ್ಲಿ 1 ಗಾಂಜಾ ಗಿಡ ಬೆಳೆಸಿರುವುದು ಕಾಣಿಸಿತು ಎಂದೂ, ನಾವು ಸ್ಥಳದಲ್ಲಿ ಸಿಕ್ಕಿದ ಶಶಿಕುಮಾರನನ್ನು ವಿಚಾರಣೆ ಮಾಡಿದಾಗ ಆತ ಗಾಂಜಾ ಗಿಡವನ್ನು ಬೆಳೆದಿರುವುದಾಗಿ 3 ಅಥವಾ 6 ತಿಂಗಳಿಗೆ ಒಮ್ಮೆ ಅಪರಿಚಿತ ಸನ್ಯಾಸಿ ಬಂದು ಗಾಂಜಾ ಸೊಪ್ಪನ್ನು ಖರೀದಿ ಮಾಡಿ ಹೊಗುತ್ತಿರುವುದಾಗಿ ತಿಳಿಸಿದನು ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 16. ಪ್ರಾ.ಸಾ-3 ರವರು ತಮ್ಮ ಸಾಕ್ಷ್ಯದಲ್ಲಿ DYSP, ನಾನು ಮತ್ತು ನನ್ನ ಜೊತೆಯಲ್ಲಿ ಇದ್ದ ಪೊಲೀಸರು ಶಶಿಕುಮಾರನಿಂದ ಗಾಂಜಾ ಗಿಡಗಳನ್ನು ಕೀಳಿಸಿದೆವು ಎಂದೂ, DYSP ರವರ ಜೊತೆಯಲ್ಲಿ ಇದ್ದ HC 235 ನೇ ರವರಿಂದ electronic ತೂಕದ ಯಂತ್ರವನ್ನು ತರಿಸಿ ಸ್ಥಳದಲ್ಲಿ ಸಿಕ್ಕಿದ ಗಾಂಜಾ ಗಿಡವನ್ನು ತೂಕ ಮಾಡಿದಾಗ ಗಾಂಜಾ ಗಿಡ 770 ಗ್ರಾಂ ತೂಗಿತು ಮತ್ತು ಸದರಿ ಗಾಂಜಾ ಗಿಡವನ್ನು ಒಂದು ಬಿಳಿಯ ಬಟ್ಟೆಯ ಚೀಲಕ್ಕೆ ಹಾಕಿ ಬಾಯಿ ಕಟ್ಟಿ ಸೀಲು ಮಾಡಿ ಪಂಚರ ಸಮಕ್ಷಮ ನಿಪಿ-2 ರಲ್ಲಿ ಗುರುತಿಸಿರುವ ಮಹಜರು ತಯಾರಿಸಿ ನಿಪಿ-3 ರಿಂದ 8 ರವರೆಗೆ ಗುರುತಿಸಿರುವ ಫೋಟೋಗಳನ್ನು ತೆಗೆಸಿ ವಶಪಡಿಸಿಕೊಂಡೆವು ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 17. ಪ್ರಾ.ಸಾ-3 ರವರು ತಮ್ಮ ಸಾಕ್ಷ್ಯದಲ್ಲಿ DYSP ರವರು ಮೇಲೆ

ಹೇಳಿದಂತೆ ಗಾಂಜಾ ಗಿಡವನ್ನು ವಶಪಡಿಸಿಕೊಂಡು ಆರೋಪಿ ಶಶಿಕುಮಾರನನ್ನು ನಮ್ಮ ಸ್ವಾಧೀನಕ್ಕೆ ಹಿಡಿದುಕೊಂಡು ಅರಕೆರೆ ಪೊಲೀಸ್ ಠಾಣೆಗೆ ಹೋಗಿ ವರದಿಯನ್ನು ತಯಾರಿಸಿ ಅರಕರೆ ಠಾಣಾದಿಕಾರಿಯಾಗಿದ್ದ PSI ಚಾಸಾ-18 ನೇ ಎಂ ಆರ್ ಬ್ಯಾಳಿ ರವರ ಕೈಗೆ ಕೊಟ್ಟರು, DYSP ರವರು ವರದಿಯ ಜೊತೆಯಲ್ಲಿ ನಿಪಿ-2 ರಲ್ಲಿ ಗುರುತಿಸಿರುವ 1 ರಿಂದ 8 ರವರೆಗೆ ಗುರುತಿಸಿರುವ ಮಹೇಶ ಬಿನ್ ಪುಟ್ಟಶೆಟ್ಟಿ ರವರಿಗೆ ಜಾರಿ ಮಾಡಿರುವ ನೋಟೀಸು, ಮಹಜರು ಮತ್ತು ಫೋಟೋಗಳನ್ನು ಚಾಸಾ-18 ರವರ ಕೈಗೆ ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 18. ಪ್ರಾ.ಸಾ-3 ರವರು ತಮ್ಮ ಸಾಕ್ಷ್ಯದಲ್ಲಿ DYSP ರವರು ವರದಿಯ ಜೊತೆಯಲ್ಲಿ ಡಿ ವಿ ಸಿದ್ದರಾಜು ರವರಿಗೆ ಜಾರಿ ಮಾಡಿರುವ ನೋಟೀಸು ಮತ್ತು ಆರೋಪಿಯನ್ನು ಚಾಸಾ-18 ರವರ ಸ್ವಾಧೀನಕ್ಕೆ ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 19. ಪ್ರಾ.ಸಾ-4/ಮರಿಯಪ್ಪ ರುದ್ರಪ್ಪ ಬ್ಯಾಳಿ ರವರು ತಮ್ಮ ಸಾಕ್ಷ್ಯದಲ್ಲಿ ದಿಃ 27.06.2023 ರಂದು ಹೆಚ್.ಎಸ್. ಮುರಳಿ ರವರ ಮತ್ತು ಪಂಚರ ಜೊತೆಯಲ್ಲಿ ಕೊಡಿಯಾಲ ಗ್ರಾಮದ ಡೈರಿ ಬಳಿ ಇದ್ದ ಶಶಿ ಕುಮಾರ ಬಿನ್ ರಾಮೇಗೌಡ ರವರ ಮನೆಯ ಹತ್ತಿರ ಹೋದಾಗ ಶಶಿಕುಮಾರ ರವರ ಮನೆಯ ಹತ್ತಿರ DYSP ರವರು ತನಿಖೆ ಮಾಡಿದಾಗ ಶಶಿಕುಮಾರ ರವರ ಮನೆಯ ಹಿಂಭಾಗ ಇರುವ ಜಾಗದಲ್ಲಿ 1 ಗಾಂಜಾ ಗಿಡ ಬೆಳೆಸಿರುವುದು ಕಾಣಿಸಿತು ಎಂದೂ, ನಾವು ಸ್ಥಳದಲ್ಲಿ ಸಿಕ್ಕಿದ ಶಶಿಕುಮಾರನನ್ನು ವಿಚಾರಣೆ ಮಾಡಿದಾಗ ಆತ ಗಾಂಜಾ ಗಿಡವನ್ನು ಬೆಳೆದಿರುವುದಾಗಿ 3 ಅಥವಾ 6 ತಿಂಗಳಿಗೆ ಒಮ್ಮೆ ಅಪರಿಚಿತ ಸನ್ಯಾಸಿ ಬಂದು ಗಾಂಜಾ ಸೊಪ್ಪನ್ನು ಖರೀದಿ ಮಾಡಿ ಹೊಗುತ್ತಿರುವುದಾಗಿ ತಿಳಿಸಿದನು ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 20. ಪ್ರಾ.ಸಾ-4 ರವರು ತಮ್ಮ ಸಾಕ್ಷ್ಯದಲ್ಲಿ DYSP ರವರು ಮತ್ತು ನನ್ನ ಜೊತೆಯಲ್ಲಿ ಇದ್ದ ಪೊಲೀಸರು ಶಶಿಕುಮಾರನಿಂದ ಗಾಂಜಾ ಗಿಡಗಳನ್ನು ಕೀಳಿಸಿ ನಮ್ಮ ಜೊತೆಯಲ್ಲಿ ಇದ್ದ HC 235 ನೇ ರವರಿಂದ electronic ತೂಕದ ಯಂತ್ರವನ್ನು ತರಿಸಿದೆವು ಎಂದೂ, DYSP ರವರು ಸ್ಥಳದಲ್ಲಿ ಸಿಕ್ಕಿದ ಗಾಂಜಾ ಗಿಡವನ್ನು ತೂಕ ಮಾಡಿದಾಗ ಗಾಂಜಾ ಗಿಡ 770 ಗ್ರಾಂ ತೂಗಿತು, ಸದರಿ ಗಾಂಜಾ ಗಿಡವನ್ನು ಒಂದು ಬಿಳಿಯ ಬಟ್ಟೆಯ ಚೀಲಕ್ಕೆ ಹಾಕಿ ಬಾಯಿ ಕಟ್ಟಿ ಸೀಲು ಮಾಡಿ ಪಂಚರ ಸಮಕ್ಷಮ ನಿಪಿ-2 ರಲ್ಲಿ ಗುರುತಿಸಿರುವ ಮಹಜರು ತಯಾರಿಸಿ ನಿಪಿ-3 ರಿಂದ 8 ರವರೆಗೆ ಗುರುತಿಸಿರುವ ಫೋಟೋಗಳನ್ನು ತೆಗೆಸಿ ವಶಪಡಿಸಿಕೊಂಡೆವು ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 21. ಪ್ರಾ.ಸಾ-4 ರವರು ತಮ್ಮ ಸಾಕ್ಷ್ಯದಲ್ಲಿDYSP ರವರು ಮೇಲೆ ಹೇಳಿದಂತೆ ಗಾಂಜಾ ಗಿಡವನ್ನು ವಶಪಡಿಸಿಕೊಂಡು ಆರೋಪಿ ಶಶಿಕುಮಾರನನ್ನು ನಮ್ಮ ಸ್ವಾಧೀನಕ್ಕೆ ಹಿಡಿದುಕೊಂಡು ಅರಕೆರೆ ಪೊಲೀಸ್ ಠಾಣೆಗೆ ಬಂದು DYSP ರವರು ವರದಿಯನ್ನು ತಯಾರಿಸಿ ನನ್ನ ಕೈಗೆ ಕೊಟ್ಟರು ಎಂದೂ, DYSP ರವರು ವರದಿಯ ಜೊತೆಯಲ್ಲಿ ನಿಪಿ-2 ರಲಿ ಗುರುತಿಸಿರುವ 1 ರಿಂದ 8 ರವರೆಗೆ ಗುರುತಿಸಿರುವ ಮಹೇಶ ಬಿನ್ ಪುಟ್ಟಶೆಟ್ಟಿ ರವರಿಗೆ ಜಾರಿ ಮಾಡಿರುವ ನೋಟೀಸು, ಮಹಜರು ಮತ್ತು ಫೋಟೋಗಳನ್ನು ನನ್ನ ಕೈಗೆ ಕೊಟ್ಟರು ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 22. ಪ್ರಾ.ಸಾ-4 ರವರು ತಮ್ಮ ಸಾಕ್ಷ್ಯದಲ್ಲಿDYSP ರವರು ವರದಿಯ ಜೊತೆಯಲ್ಲಿ ಡಿ ವಿ ಸಿದ್ದರಾಜು ರವರಿಗೆ ಜಾರಿ ಮಾಡಿರುವ ನೊಟೀಸು ಮತ್ತು ಆರೋಪಿಯನ್ನು ನನ್ನ ಸ್ವಾಧೀನಕ್ಕೆ ಕೊಟ್ಟರು ಮತ್ತು ನಾನು DYSP ಕೊಟ್ಟ ವರದಿ ಮತ್ತು ಇತರ ದಾಖಲೆಗಳ ಆಧಾರದ ಮೇಲೆ ಆರೋಪಿಯ

ವಿರುದ್ಧ 104/23 ನೇ ಪ್ರಕರಣ ದಾಖಲಿಸಿ ನಿಪಿ.11 ರಲ್ಲಿ ಗುರುತಿಸಿರುವ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿದ್ದೇನೆ ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 23. ಪ್ರಾ.ಸಾ-4 ರವರು ತಮ್ಮ ಸಾಕ್ಷ್ಯದಲ್ಲಿ ದಿಃ 10.07.2023 ರಂದು ನಿಪಿ.14 ಮತ್ತು 15 ರಲ್ಲಿ ಗುರುತಿಸಿರುವ 27.06.2023 ನೇ ದಿನಾಂಕದ DYSP ಕಛೇರಿಯ ಠಾಣಾ ದಿನಚರಿಯ ಪ್ರತಿಯನ್ನು ಕವಚ ಪತ್ರದ ಜೊತೆಯಲ್ಲಿ DYSP ರವರು ನನಗೆ ಕಳುಹಿಸಿದ್ದಾರೆ ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 24. ಪ್ರಾ.ಸಾ-4 ರವರು ತಮ್ಮ ಸಾಕ್ಷ್ಯದಲ್ಲಿ ನಾನು DYSP ರವರಿಂದ ಗಾಂಜಾ ವಸ್ತುಗಳನ್ನು ಪಡೆದುಕೊಂಡ ವಿಚಾರವನ್ನು PF ನಂಬರ್ 55/23 ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ವರದಿ ಕಳುಹಿಸಿ ತನಿಖೆ ಕಾಲದಲ್ಲಿ ಸಿದ್ದರಾಜು ಬಿನ್ ದೇವೆಗೌಡ ಮತ್ತು ಮಹೇಶ ಬಿನ್ ಪುಟ್ಟಶೆಟ್ಟಿ ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿದ್ದೇನೆ ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 25. ಪ್ರಾ.ಸಾ-4 ರವರು ತಮ್ಮ ಸಾಕ್ಷ್ಯದಲ್ಲಿ ನಾನು ಶ್ರೀರಂಗಪಟ್ಟಣದಲ್ಲಿ ಇರುವ ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಧೀಶರಿಗೆ ವಿನಂತಿ ಪತ್ರ ಕಳುಹಿಸಿ PF ನಂಬರ್ 55/23 ರಲ್ಲಿ ನಮೂದಿಸಿರುವ ವಸ್ತುಗಳ ಇನ್ವೆಂಟರಿ ಮಾಡಿಸಿದ್ದೇನೆ ಮತ್ತು ನನ್ನ ವಿನಂತಿಯ ಪ್ರಕಾರ ನ್ಯಾಯಾಧೀಶರು 30.06.2023 ರಂದು ಇನ್ವೆಂಟರಿ ನಡೆಸಿ ಫೋಟೋ ತೆಗೆಸಿ ವರದಿ ತಯಾರಿಸಿ ನಮ್ಮ ಕಛೇರಿಗೆ ಕಳುಹಿಸಿದ್ದಾರೆ ಎಂದೂ ನ್ಯಾಯಾಧೀಶರು ಇನ್ವೆಂಟರಿ ಪ್ರಕ್ರಿಯೆ ನಡೆಸಿದಾಗ ನಾನು ಹಾಜರಿದ್ದೆನು ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 26. ಪ್ರಾ.ಸಾ-4 ರವರು ತಮ್ಮ ಸಾಕ್ಷ್ಯದಲ್ಲಿ ತನಿಖೆ ಕಾಲದಲ್ಲಿ 01.06.2021 ನೇ ದಿನಾಂಕದ ಶಶಿಕುಮಾರ ರವರು ವಾಸವಾಗಿದ್ದ ಭೋಗ್ಯದ ಕರಾರು ಪತ್ರದ ಪ್ರತಿ, ASI ರವರು ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ 65(ಬಿ) ರನ್ವಯ ಕೊಟ್ಟಂತಹ ಪ್ರಮಾಣ ಪತ್ರ, ಕೆ ಆರ್ ಸಾಗರ CPI ಕಛೇರಿಯ 27.6.2023 ನೇ ದಿನಾಂಕದ ದಿನಚರಿಯ ಪ್ರತಿ ಅಡಕದ ಜೊತೆಯಲ್ಲಿ ಪಡೆದಿದ್ದೇನೆ ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 27. ಪ್ರಾ.ಸಾ-4 ರವರು ತಮ್ಮ ಸಾಕ್ಷ್ಯದಲ್ಲಿ ನಾನು ರಾಸಾಯನಿಕ ಪರೀಕ್ಷೆಗೆ RFSL ಕಛೇರಿಗೆ ಕಳುಹಿಸಿ ಉಳಿದ PF 55/23 ರಲ್ಲಿ ನಮೂದಿಸಿದ ವಸ್ತುಗಳನ್ನು ನಾಶಪಡಿಸುವಂತೆ ದಿಃ 08.07.2023 ರಂದು ಮಂಡ್ಯ drug disposal committee ಗೆ ವಿನಂತಿ ಪತ್ರವನ್ನು ಕಳುಹಿಸಿದ್ದೇನೆ ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 28. ಪ್ರಾ.ಸಾ-4 ರವರು ತಮ್ಮ ಸಾಕ್ಷ್ಯದಲ್ಲಿ ನಾನು ದಿಃ 13.07.2023 ರಂದು RFSL ಕಛೇರಿಯವರು ಕಳುಹಿಸಿದ ನಿಪಿ.16 ರಲ್ಲಿ ಗುರುತಿಸಿರುವ ವರದಿಯನ್ನು 26.08.2023 ರಂದು ಮಾದರಿ ಮಾಲಿನ ಸಮೇತ ಪಡೆದಿದ್ದೇನೆ ಮತ್ತು ದಿಃ 05.10.2023 ರಂದು ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 29. ನಿಮ್ಮ ಪರವಾಗಿ ಯಾವುದಾದರೂ ಸಾಕ್ಷಿ ಇದೆಯೇ?

ಉತ್ತರ :

ಪ್ರಶ್ನೆ 30. ಹೇಳುವುದು ಇನ್ನೇನಾದರೂ ಇದೆಯೇ?
ಉತ್ತರ :

(ಮೇಲ್ಕಂಡ ಪ್ರಶ್ನೆಗಳನ್ನು ನಾನೇ ಆರೋಪಿಗೆ ತಿಳಿಯುವ ಕನ್ನಡ ಭಾಷೆಯಲ್ಲಿ ಓದಿ, ಹೇಳಿ, ಅವರು ಕೊಟ್ಟ ಉತ್ತರಗಳನ್ನು ನಾನೇ ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸುತ್ತೇನೆ)

**(ಜಿ.ಎನ್. ಸುಬ್ರಮಣ್ಯ )**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಂಡ್ಯ.

ದಿನಾಂಕಃ **23.02.2026**
ಮಂಡ್ಯ